'ಯಾವಾಗ ಬರುತ್ತಾನೆ?' ಕೇಳಿದರು. 'ಈ ಬಾರಿ ಮಗ ಬಂದಾಗ ನಾವೆಲ್ಲ ಹೈದರಾಬಾದಿಗೆ ಬರುತ್ತೇವೆ' ಅಂದಿದ್ದೆ. 'ಅಚ್ಛಾ... ಬನ್ನಿ ಬನ್ನಿ' ಅಂದಿದ್ದರು. ಮಾತು ಅವರ ಹಳೆ ಕಾಲದ ಬಗ್ಗೆ ಹೊರಳಿದಾಗ ನಡುವೆ, 'ಅನುಪಮ, ಈಗೀಗ, ಹಳೆಯ ಒಡನಾಟದ ಬಹಳಷ್ಟು ಜನರ ಜೊತೆ ಹೌ ಆರ್ ಯು ಅಂದಮೇಲೆ ಮುಂದಿನ ಮಾತಿಗಾಗಿ ಹುಡುಕುತ್ತೇನೆ' ಎಂದಂದು, ಅರೆ ಚಣ ಮೌನವಾದರು. ನಂತರ ಒಂದು ನಿಟ್ಟುಸಿರಿನಂತೆ 'ಹೋಗ್ಲಿ ಬಿಡು... ಬೆಂಗಳೂರು ಈಗ ನಿನಗೆ ಹೇಗಾಗುತ್ತಿದೆ ಹೇಳು' ಅಂದರು. ಹೇಳದೆಯೇ ಇನ್ನೆಷ್ಟೊ ಹೇಳಿದಂತೆ ಎಂಬುದು ಇದಕ್ಕೇ ಅಲ್ಲವೆ.

ಇದೀಗ ವಾರಗಳುರುಳಿದರೂ 'ಕೆವಿಟಿ ಇನ್ನಿಲ್ಲ' ಎಂಬುದನ್ನು ನಂಬಬೇಕೆನಿಸಲೇ ಇಲ್ಲ. ನಿರ್ಮಲಕ್ಕನ (ತಿರುಮಲೇಶರ ಪತ್ನಿ) ಬಳಿ ಮಾತಾಡಬೇಕಿತ್ತು. ಧೈರ್ಯವಿರಲಿಲ್ಲ. ಸುದ್ದಿ ತಿಳಿದ ತಕ್ಷಣ ನಿರ್ಮಲಕ್ಕನಿಗಾಗಿ ಸಂದೇಶ ಕಳಿಸಿದ್ದೆ. 'ನೀವಿದನ್ನು ನೋಡಿದರೆ; ಮಾತಾಡುವ ಮನಸ್ಸು ಬಂದಾಗ ನನಗೊಂದು ಮೆಸೇಜ್ ಹಾಕಿ. ನಾನು ಮಾತಾಡುವೆ' ಎಂದು ಬರೆದಿದ್ದೆ. ಒಂದು ಬೆಳಗ್ಗೆ ನಿರ್ಮಲಕ್ಕ ಕರೆ ಮಾಡಿ, 'ನಿನ್ನ ಮೆಸೇಜ್ ನಿನ್ನೆ ರಾತ್ರಿ ನೋಡಿದೆ' ಅಂದರು. ತಿರುಮಲೇಶರನ್ನು ಅಕ್ಷರಶಃ ಜೋಪಾನ ಮಾಡಿದ ನಿರ್ಮಲಕ್ಕ, ತಿರುಮಲೇಶರು ಕೊನೆಯ ದಿನಗಳಲ್ಲುಂಡ ನೋವನ್ನು ನೆನೆದು ನೊಂದರು. ಹೌದು, ಹೊರಗಿನವರ ಕಣ್ಣಿಗೆ ವಯಸ್ಸಾಯಿತು... ವಯೋಸಹಜ ಖಾಯಿಲೆಗಳು ಎಲ್ಲವೂ ಸಹಜವಾಗಿ ಕಂಡೀತು. ಆದರೆ, ಸಂಗಾತಿಗಾಗುವ ಖಾಲಿತನದ ಅನುಭವ ಅಸಹನೀಯ. ಈಗಲೂ ಅವರು ತಿರುಮಲೇಶರು ಬರೆದಿಟ್ಟ ಕೊನೆ ಕೊನೆಯ ಬರಹಗಳನ್ನೆಲ್ಲ ಕಾಪಿಟ್ಟು ನಮ್ಮ ಓದಿಗೊದಗಿಸಿಕೊಡುವ ತಯಾರಿ ನಡೆಸುತ್ತಿದ್ದಾರೆ.

2011ರ ಮೊದಲು ತಿರುಮಲೇಶರೆಂದರೆ ಪತ್ರಿಕೆಗಳಲ್ಲಿ, ಪುಸ್ತಕದಲ್ಲಿ ಓದಲು ಸಿಗುವ ವಿದ್ವಾಂಸರು, ಆಂಗ್ಲಭಾಷಾ ಪ್ರಾಧ್ಯಾಪಕರು, ದೊಡ್ಡ ಬರಹಗಾರರು. ಒಡನಾಟಕ್ಕೆ ಬಿದ್ದ ಮೇಲೆ ಈ ಕಿರೀಟಗಳಿಂದ ಅವರೆಷ್ಟು ದೂರ ಎಂಬುದು ಅನುಭವಕ್ಕೆ ಬಂತು.

'ಕರವೀರದ ಗಿಡ' ಕಥಾ ಸಂಕಲನ ಅವರಿಗೆ ತಲುಪುವಾಗ; ಅವರು ಯಾವುದೋ ಬರವಣಿಗೆಯಲ್ಲಿದ್ದಿದ್ದರಿಂದ ಅದನ್ನು ಮೊದಲು ಓದಿದ್ದು ನಿರ್ಮಲಕ್ಕ ಎಂಬುದು ತಿರುಮಲೇಶರೊಂದಿಗಿನ ಟೆಲಿಫೋನ್ ಮಾತುಕತೆಯಲ್ಲಿ ಗೊತ್ತಾಯಿತು. ಕಥೆಗಳ ಬಗ್ಗೆ ಅವರು ಹೇಳುತ್ತಿದ್ದರೆ ನಾನು ಏನು ಹೇಳಲೂ ತಿಳಿಯದೆ ಪೆದ್ದು ಪೆದ್ದಾಗಿ ಏನು ಹೇಳಿದೆನೊ. ಆ ನನ್ನ ಸಂಕೋಚ ಸಹಜವೇ. ಆಗಲೇ ಅವರು ಕಣ್ಣಿನ ತೊಂದರೆಯಿಂದ ಬಳಲುತ್ತಿದ್ದರು. ಮಾತು ಸುರುವಾದ ಮೇಲೆ ದೊಡ್ಡೋರು ಎಂಬ ಆತಂಕ ಮರೆಯಾಗಿದ್ದೇ ಗೊತ್ತಾಗಿರಲಿಲ್ಲ. ಅದರ ನಂತರದ ವರ್ಷಗಳಲ್ಲಿ ತಿರುಮಲೇಶರು ಎಡನ್ನಾಡಿಗೆ ಬಂದರೆ, ಎಡನ್ನಾಡಿನ ಅವರ ಪುಟ್ಟ ಮನೆಯ ಹೊರ ಚಾವಡಿಯಲ್ಲಿ ನಾವೆಲ್ಲರೂ ಸೇರಿ ಪಟ್ಟಾಂಗ. ಒಮ್ಮೆ ಊರಿಗೆ ಬಂದರೆ ಕೆಲವು ದಿನ ಇರುತ್ತಿದ್ದುದರಿಂದ ಸಾಕಷ್ಟು ಬಾರಿ ಭೇಟಿಯಾಗುತ್ತಿದ್ದೆವು. ನಮ್ಮ ಪೆರ್ಣೆ ಮನೆ ಶ್ರೀನಿಕೇತನದಲ್ಲಿ ಎಲ್ಲರೂ ಸೇರಿ ಊಟ-ಮಾತುಕತೆ. ನಮ್ಮ ಬಳಕೆಯ ಅನುಭವದಲ್ಲಿ, ತಿರುಮಲೇಶರ ಒಡನಾಟ ಮಾತುಕತೆಯೆಂದರೆ ಆಪ್ತತೆಯ ಮಡಿಲು. ನಿರ್ಮಲಕ್ಕ ಹಾಗೂ ತಿರುಮಲೇಶರು ನಮ್ಮಲ್ಲಿಗೆ ಬರುವುದು ಅಥವಾ ನಾನು ಹಾಗೂ ಮಗ ಅನಘ ಶ್ಯಾಮ್ ಅವರಲ್ಲಿಗೆ ಸಂಜೆ ಹೊತ್ತು ಹೋಗುವುದು. ಬಿಡುವು ನೋಡಿಕೊಂಡು ಪ್ರಸಾದ್ ಬಂದು ಸೇರಿಕೊಳ್ಳುತ್ತಿದ್ದರು.

ನಮ್ಮ ಮಾತುಕತೆ ಬಹಳ ಮುಕ್ತವಾಗಿರುತ್ತಿತ್ತು. ಕೆವಿಟಿ ಅದನ್ನೇ ಇಷ್ಟಪಡುತ್ತಿದ್ದರು. ಯಾವುದೇ ಸಂಗತಿ ಬಗ್ಗೆ ಅವರು ಮಾತಾಡುತ್ತಿದ್ದರೆ ಕೇಳುತ್ತಿರುವ ನಮ್ಮೊಳಗೆ ಅರಿವಿನ ಬೆಳಕೊಂದು ಮಿನುಗುತ್ತಿತ್ತು. ಅದು ಹೇಗೆ ಅಂದರೆ ಪ್ರಶ್ನೆಗಳು ನಮ್ಮೊಳಗೆ ಹುಟ್ಟಿಕೊಳ್ಳಬೇಕು. ಆ ಪ್ರಶ್ನೆಗಳು ಮತ್ತಷ್ಟು ಕವಲೊಡೆಯಬೇಕು... ಪ್ರಶ್ನೆ... ಜಿಜ್ಞಾಸೆ. ಒಂದರ ಬೆನ್ನಿಗೊಂದರಂತೆ. ಬೌದ್ಧಿಕ ಪ್ರಖರತೆಯ ವೈಚಾರಿಕ ಚಿಂತಕರ ಬಳಿ ಪೆದ್ದುಪೆದ್ದಾಗಿ ಪ್ರಶ್ನೆ ಕೇಳುವುದರಿಂದಲೂ ವೈಚಾರಿಕ ಅಸ್ಪಷ್ಟತೆಗಳಿಗೊಂದು ಸ್ಪಷ್ಟ ತಿಳಿವು ಕಂಡುಕೊಳ್ಳಬಹುದೆಂಬುದು ತಿರುಮಲೇಶರ ಜೊತೆಗಿನ ಚರ್ಚೆಯಲ್ಲಿ ನನಗಾದ ಅನುಭವ. ಆ ಮಾತು, ಚರ್ಚೆಗಳನ್ನೆಲ್ಲ ದಾಖಲಿಸುವ ಅವಕಾಶವಿತ್ತು. ಬಳಸಿಕೊಳ್ಳದಿದ್ದುದು ನನ್ನ ಹೊಣೆಗೇಡಿತನ ಅನಿಸುತ್ತದೆ. ಒಮ್ಮೆಯಂತೂ ಅವಧೂತತನದಲ್ಲಿರುವ